ಓ.ಎಸ್. ನಂ. 175/2017

ಪಿ.ಡಬ್ಲ್ಯೂ: 02 (ಎಂ. ವೀರೇಶ)

ದಿನಾಂಕ: 22.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು: ಪ್ರತಿವಾದಿ ಪರ – ಶ್ರೀ TMS ವಕೀಲರಿಂದ.

ಈ ದಾವೆಯನ್ನು ಗೌರಮ್ಮನವರು ವೀರಪ್ಪನ ವಿರುದ್ದ ಹೂಡಿರುತ್ತಾರೆ. 1 ನೇ ಪ್ರತಿವಾದಿ ನನ್ನ ತಂದೆಯ ತಮ್ಮ. ನನ್ನ ತಾತನ ಹೆಸರು ಚನ್ನಬಸಪ್ಪ. ಆತನಿಗೆ ಇಬ್ಬರು ಹೆಂಡತಿಯರು, ಅವರು ಕೊಟ್ರಮ್ಮ ಹಾಗೂ ಸಂಗನಬಸಮ್ಮ. ಕೊಟ್ರಮ್ಮನ ಮಗ ನನ್ನ ತಂದೆ ಎಂದರೆ ಸರಿ. ನನ್ನ ತಂದೆಗೆ ವೀರಪ್ಪ ಅಲಿಯಾಸ್ ಜಿಡ್ಡಪ್ಪ ಎಂದು ಕರೆಯುತ್ತಿದ್ದರು ಎಂದರೆ ಸಣ್ಣವೀರಪ್ಪ ಅಲಿಯಾಸ್ ಜಿಡ್ಡಪ್ಪ ಎಂದು ಕರೆಯುತ್ತಿದ್ದರು. ಸಂಗನಬಸಮ್ಮನ ಮಗ 1 ನೇ ಪ್ರತಿವಾದಿ ಎಂದರೆ ಹೌದು. ಆತನಿಗೆ ವೀರಪ್ಪ ಅಲಿಯಾಸ್ ಸಣ್ಣವೀರಪ್ಪ ಎಂದು ಕರೆಯುತ್ತಿದ್ದರು ಎಂದರೆ ವೀರಪ್ಪ ಎಂದು ಮಾತ್ರ ಕರೆಯುತ್ತಿದ್ದರು. ನನ್ನ ತಂದೆ ದೊಡ್ಡ ಮಗ ಹಾಗೂ 1 ನೇ ಪ್ರತಿವಾದಿ ಸಣ್ಣ ಮಗ.

ಚನ್ನಬಸಪ್ಪನ ಇಬ್ಬರು ಮಕ್ಕಳ ಹೆಸರು ವೀರಪ್ಪ ಎಂದು ಇದ್ದ ಕಾರಣ ಸಂಗನಬಸಮ್ಮನ ಮಗನನ್ನು ಸಣ್ಣವೀರಪ್ಪ ಎಂದು ಕರೆಯುತ್ತಿದ್ದರು ಎಂದರೆ ಕುಟುಂಬದಲ್ಲಿ 3 ಜನ ವೀರಪ್ಪ ಇದ್ದ ಕಾರಣ ನನ್ನ ಚಿಕ್ಕಪ್ಪನನ್ನು ಸಣ್ಣವೀರಪ್ಪ ಎಂದು ಕರೆಯುತ್ತಿದ್ದರು. ನನ್ನ ತಂದೆ 18 ವರ್ಷಗಳ ಹಿಂದೆ ವಿಭಾಗ ಆಗಿರುತ್ತಾರೆ. ಭಾಗದನ್ವಯ ಪಹಣಿ ಪತ್ರಿಕೆಗಳು ಬಂದಿರುತ್ತವೆ ಎಂದರೆ ಹೌದು. ಈಗ ನೋಡುತ್ತಿರುವ 3 ಪಹಣಿಗಳು ಸದರಿ ವಿಭಾಗದನ್ವಯ ನನ್ನ ತಂದೆಯ ಹೆಸರಿಗೆ ಬಂದಿರುವ ಪಹಣಿ ಪತ್ರಿಕೆಗಳು ಎಂದರೆ ಹೌದು. ಅವುಗಳನ್ನು ಒಟ್ಟಾರೆಯಾಗಿ ನಿಡಿ 2 ಎಂದು ಗುರುತಿಸಲಾಯಿತು. ನನ್ನ ತಂದೆ ಹೆಸರು ದಾಖಲಾತಿಗಳಲ್ಲಿ ಸಣ್ಣವೀರಪ್ಪ ಎಂದು ಇದೆ. ಅವರು ಸಣ್ಣವೀರಪ್ಪ ಎಂದು ಸಹಿ ಮಾಡುತ್ತಿದ್ದರು. ನಿಡಿ 2 ರಲ್ಲಿರುವುದು ನನ್ನ ತಂದೆಯ ಹೆಸರು. ನನ್ನ ಚಿಕ್ಕಪ್ಪನ ಹೆಸರಿಗೆ ಸರ್ವೆ ನಂಬರ್ 798 ಎಫ್ ರ 2.28 ಸೆಂಟ್ಸ್, ಸರ್ವೆ ನಂಬರ್ 801 ಎ ರ 2.35 ಸೆಂಟ್ಸ್, ಸರ್ವೆ ನಂಬರ್ 613 ಡಿ ರ 0.22 ಸೆಂಟ್ಸ ಬಂದಿದೆ ಎಂದರೆ ಹೌದು. ಅದರನ್ವಯ ಆತ ಪಹಣಿ ಪತ್ರಿಕೆಗಳನ್ನು ಮಾಡಿಸಿಕೊಂಡಿದ್ದಾರೆ ಎಂದರೆ ಹೌದು. ದಾವಾ ಸ್ವತ್ತಿನ ಸರ್ವೆ ನಂಬರ್ 798 ಎಫ್ ಆಗಿರುತ್ತದೆ. ಅದನ್ನು ನನ್ನ ಚಿಕ್ಕಪ್ಪ ದಿ: 05.06.2012 ರಂದು ನೊಂದಾಯಿತ ಕ್ರಯ ಪತ್ರದ ಮೂಲಕ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ವಾದಿಗಳಿಗೆ ಹಾಗೂ ನನ್ನ ತಂದೆಗೆ ತಿಳಿದಿತ್ತು ಎಂದರೆ ಗೊತ್ತಿರಲಿಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿ ವಿರುದ್ದ ಕ್ರಯ ಪತ್ರ ಮಾಡಿಕೊಡುವಂತೆ ದಾವೆ ಸಲ್ಲಿಸಿದ್ದರು ಎಂದರೆ ಅದು ನನಗೆ ಗೊತ್ತಿಲ್ಲ. ಅವರ ಮದ್ಯ ಇದ್ದ ವಿಚಾರ ನನಗೆ ಗೊತ್ತಿಲ್ಲ. ದಾವೆ ಸಲ್ಲಿಸಿದ ಬಗ್ಗೆ ವಾದಿಗಳಿಗೆ ಗೊತ್ತಿತ್ತೆ ಎಂದರೆ ಗೊತ್ತಿರಲಿಲ್ಲ. ಆ ದಾವೆ ಏನಾಗಿದೆ

ಎಂದು ನನಗೆ ಗೊತ್ತಿದೆಯೇ ಎಂದರೆ ಇನ್ನು ನಡೆಯುತ್ತಿದೆ. ಸಾಕ್ಷಿ ಮುಂದುವರೆದು ತಹಶೀಲ್ದಾರ ನ್ಯಾಯಾಲಯದಲ್ಲಿ ನಮ್ಮಂತೆ ಆಗಿದ್ದು, 2 ನೇ ಪ್ರತಿವಾದಿ ಅವರ ಹೆಸರಿಗೆ ಮ್ಯುಟೇಶನ್ 4-5 ವರ್ಷಗಳ ಹಿಂದೆ ಮಾಡಿಸಿಕೊಂಡಿರುತ್ತಾರೆ.

ಸಾಕ್ಷಿ ಮುಂದುವರೆದು ಗೌರಮ್ಮರವರ ಹೆಸರಿಗೆ ಮ್ಯುಟೇಶನ್ ಆದ ನಂತರ 2 ನೇ ಪ್ರತಿವಾದಿ ಅವರ ಹೆಸರಿಗೆ ಮ್ಯುಟೇಶನ್ ಮಾಡಿಸಿಕೊಂಡಿರುತ್ತಾರೆ. 2 ನೇ ಪ್ರತಿವಾದಿಯ ಹೆಸರಿಗೆ ಮ್ಯುಟೇಶನ್ ಆದ ಬಗ್ಗೆ ವಾದಿಗಳಿಗೆ ಗೊತ್ತಿರುತ್ತದೆ. 2 ನೇ ಪ್ರತಿವಾದಿ ನ್ಯಾಯಾಲಯದ ಮೂಲಕ ದಾವೆಯನ್ನು ಹೂಡಿ ತನ್ನ ಹೆಸರಿಗೆ ಕ್ರಯ ಪತ್ರ ಮಾಡಿಸಿಕೊಂಡಿದ್ದಾನೆ ಎಂದರೆ ಅದು ನನ್ನ ಗಮನಕ್ಕೆ ಇಲ್ಲ. ಅದೇರೀತಿ 2 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನವನ್ನು ನ್ಯಾಯಾಲಯದ ಮೂಲಕ ಪಡೆದಿರುತ್ತಾರೆ ಎಂದರೆ ಹೌದು. ಅಂದಿನಿಂದ 2 ನೇ ಪ್ರತಿವಾದಿಯೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾನೆ ಎಂದರೆ ಹೌದು. ದಾವಾ ಸ್ವತ್ತು ನನ್ನ ತಂದೆಯ ಭಾಗಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಅದರಲ್ಲಿ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆ ಅಧಿಕಾರ ಇಲ್ಲದಿದ್ದರೂ ವಾದಿಗಳಿಗೆ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.